
ಓದಿದರಂತೆ. ಬಂಧುಗಳಿದ್ದರೂ ಯಾರೂ ಸಹಾಯ ಮಾಡಲಿಲ್ಲವಂತೆ...’

ನಮ್ಮಪ್ಪ, ದೊಡ್ಡ ಪ್ರೊಫೆಸರ್, ಪಾಪ್ಯುಲರ್ ರೈಟರ್, ಅವರಿಗೆ ನೂರಾರು ವಿದ್ಯಾರ್ಥಿಗಳಿದ್ದಾರೆ. ದೇಶದ ಎಲ್ಲಾ ಯೂನಿವರ್ಸಿಟಿಗಳಲ್ಲಿ ಸ್ನೇಹಿತರಿದ್ದಾರೆ ಅನ್ನೋ ಹೆಮ್ಮೆ ನಾನು ಕಾಲೇಜಿಗೆ ಸೇರೋವರೆಗೂ ಇತ್ತು. ಆಮೇಲೆ ಅವರು ಸರಿ ಇಲ್ಲ ಅಂತ ಅನ್ನಿಸೋಕೆ ಶುರುವಾಯ್ತು. ಅಪ್ಪ, ನಮ್ಮ ಜತೆ ಇದ್ದದ್ದು ಕಡಿಮೆ. ಮನೆಯಲ್ಲಿ ಅಮ್ಮ ನಾನು ಇಬ್ಬರೇ ಇದ್ವಿ. ಅಪ್ಪನಿಗೆ ಎಕ್ಸ್ಟ್ರಾಮ್ಯಾರಿಟಲ್ ಅಫೇರ್‌ಗಳಿದ್ದವು. ಅವರ ಜತೆ ಅಮ್ಮ ಮಾತೇ ಆಡ್ತಿರಲಿಲ್ಲ. ಅಪ್ಪನಿಗೆ ಒಂದೆರಡಲ್ಲ, ಹಲವು ಹೆಂಗಸರ ಜತೆ ಸಂಬಂಧಗಳಿದ್ದವಂತೆ! ಅವರ ಸ್ಟೂಡೆಂಟ್‌ಗಳು, ಕಲೀಗ್‌ಗಳು ಹೀಗೇ... ಪರಿಚಯವಾದ ಹೆಂಗಸನ್ನು ಒಂದು ಗಂಟೆಯೊಳಗೆ ಹಾಸಿಗೆಗೆ ಕರೆಯುವ ಚಾಲಾಕಿ ಅಂತ ಅವರ ಫ್ರೆಂಡೊಬ್ಬರು ನನ್ನತ್ರ ಬೇಸರದಿಂದ ಹೇಳಿದ್ದರು. ಅದನ್ನೆಲ್ಲ ಕೇಳಿದ ಮೇಲೆ ನನ್ನ ಅಭಿಪ್ರಾಯ ಬದಲಾಯ್ತು.



ಅಪ್ಪ, ಅವರ ಕಲೀಗೊಬ್ಬರ ಜತೆ ಅಫೇರ್ ಇಟ್ಟುಕೊಂಡಿದ್ದಾರೆ ಅನ್ನೋದನ್ನು ನನ್ನ ಫ್ರೆಂಡೊಬ್ಬ ಗೇಲಿ ಮಾಡಿದ್ದ. ಅಗೋ ಅಲ್ಲಿ ಹೋಗ್ತಿದ್ದಾರಲ್ಲ ಅವರು ನಿಮ್ಮ ಚಿಕ್ಕಮ್ಮ ಅಂತ ಹೆಂಗಸೊಬ್ಬಳನ್ನು ತೋರಿಸಿ ನಕ್ಕಿದ್ದ. ಆವತ್ತು ಅವಮಾನ ಆಗಿತ್ತು. ಆಕೆಗೆ ಬಲರಾಮ್ ಅವರ ಜತೆ ಇದ್ದ ಅಫೇರ್ ಗೊತ್ತಾದ ಮೇಲೆ ಅವರ ಗಂಡ ಮಗನ ಜತೆ ಮನೆ ಬಿಟ್ಟೇ ಹೋದರಂತೆ! ಆಮೇಲೆ ಅಪ್ಪ ಆಕೆಯ ಮನೆಗೇ ಹೋಗಿ ಇದ್ದುಬಿಟ್ಟರು! ಅಪರೂಪಕ್ಕೆ ನಮ್ಮ ಮನೆಗೆ ಬರೋರು. ಇದರಿಂದ ಅಮ್ಮನಿಗೆ ಡಿಪ್ರೆಶನ್ ಜಾಸ್ತಿ ಆಯ್ತು. ನಾನು ಮನೆಯಲ್ಲಿದ್ದಾಗ ಗೆಲುವಾಗಿ ಇರ್ತಿದ್ದರು. ಅವರಿಗೆ ತುಂಬಾ ಇನ್‌ಸೆಕ್ಯೂರ್ ಫೀಲ್ ಇತ್ತು. ಸದ್ಯ ನನಗೆ ಹೆಣ್ಣುಮಕ್ಕಳಿಲ್ಲ ಅನ್ತಿದ್ದರು. ಒಂದು ದಿನ ಇದ್ದಕ್ಕಿದ್ದ ಹಾಗೇ ಅಮ್ಮ ಸತ್ತು ಹೋದರು, ಹಾರ್ಟ್ ಅಟ್ಯಾಕ್‌ನಿಂದ. ಆಗ ನಾನು ಹೈದರಾಬಾದ್‌ಗೆ ಇಂಟರ್ವ್ಯೂಗೆ ಅಂತ ಹೋಗಿದ್ದೆ. ಅಪ್ಪ ಆ ಹೆಂಗಸಿನ ಜತೆ ದುಬೈನಲ್ಲಿದ್ದರು. ಅವರು ಅಮ್ಮನ ಅಂತ್ಯಕ್ರಿಯೆಗೂ ಬರಲಿಲ್ಲ.